ಒಂದು ಬಿಲ್ಲಿನ ಜೊತೆ ನೀಡ್ತಾರೆ. ಹೆಚ್ಚಾಗಿ ಕಲಾಕೃತಿಗಳು ಸುಲಭವಾಗಿ ಸಾಗಿಸಬಲ್ಲಂತಹವುಗಳಾಗಿರದ್ದರಿಂದ, ಅವನ್ನು ಮಳಿಗೆಯ ಹುಡುಗನೇ ತಂದು ಕಾರಿನಲ್ಲಿ ರಿಸುತ್ತಾನೆ. ಡೆಲಿವರಿ ಚಲನ್ನಿನಲ್ಲಿ ನಿಮ್ ಕಾರಿನ ನಂಬರ್ ನಮೂದಿಸ್ತಾರೆ. ಆ ಚಲನನ್ನು ಸೆಕ್ಯುರಿಟಿಯವ್ನು ತೆಗೆದಿರಿಸುತ್ತಾನೆ. ಅಂಗಡಿಯವನ ಕಂಪ್ಯೂಟರಿನಲ್ಲಿ ನಿಮ್ಮ ಕಾರಿನ ನಂಬರು ಯಾವಾಗ್ಲೂ ಇರ್ತದೆ. ಕಾರಿನ ನಂಬರ್ ಇದ್ರೆ ಅದ್ರ ಮಾಲೀಕನನ್ನು ಸುಲಭವಾಗಿ ವಾಹನ್ ಜಾಲತಾಣದ ಮೂಲಕ ಪತ್ತೆ ಮಾಡಬಹುದು."

"ನನ್ಗೆ ಅವ್ನು ಮೂರು ದಿವಸಗಳ ಅವಕಾಶ ಕೊಟ್ಟಿದಾನೆ. ಏನು ಮಾಡ್ಲಿ ಅಂತ ಗೊತ್ತಾಗ್ತಾ ಇಲ್ಲ. ಆ ಹೂದಾನಿಯಲ್ಲಿ ಏನಾದ್ರೂ ವಿಶೇಷತೆ ಇದೆಯಾ? ಅದರ ಅಸಲಿ ಬೆಲೆ ಅಧಿಕವಿರಬಹುದೆ? ಆ ಬಗ್ಗೆ ನಿಮ್ಮ ಅಭಿಪ್ರಾಯ ಕೇಳೋಣ ಅಂತ ಬಂದೆ."

"ತಂಗರಾಜು, ನಿಮ್ಗೆ ನಾನು ಎರಡು ದಿನದೊಳಗೆ ಹೇಳ್ತೀನಿ."

ನಮ್ಮ ಅತಿಥಿ ಹೊರಟು ಹೋದ ಮೇಲೆ, ಬಹಳ ಸಮಯ ಕರಮಚಂದ ಆ ಬಿಲ್ಲನ್ನೇ ಗಮನಿಸ್ತಾ, ಯಾವುದೋ ಯೋಚನೆಯಲ್ಲೇ ಮುಳುಗಿದ್ದ.

★★★

ಮರುದಿನ ನಮ್ಗೆ ಇನ್ನೊಂದು ಅಚ್ಚರಿ ಕಾದಿತ್ತು. ಬೆಳಿಗ್ಗಿನ ಚಹಾ ಹೀರುತ್ತಿದ್ದಾಗ, ನಾನು ತಂಗರಾಜುವಿನ ಪ್ರಸ್ತಾಪ ಮಾಡ್ದೆ.

"ಬಿದ್ದಪ್ಪ, ನಿನ್ಗೆ ಏನು ಅನ್ಸುತ್ತೆ ಅನ್ನೋದನ್ನ ಮೊದ್ಲು ಹೇಳು."

"ಪ್ರಾಚೀನ ಕಲಾಕೃತಿಗಳಿಗೆ ಇಷ್ಟೇ ದರ ಅಂತ ಅನ್ನೋದಿಲ್ಲ. ಎಲ್ಲವೂ ಫ್ಯಾನ್ಸಿ ರೇಟು. ನನಗನ್ನಿಸುತ್ತೆ ಸ್ಯಾಮುಯೆಲ್ ಒಂದು ವಸ್ತುವಿಗೆ ಹೆಚ್ಚು ದರ ಹೇಳಿ, ಇನ್ನೆರಡಕ್ಕೆ ಕಮ್ಮಿ ನೀಡಿ, ಒಟ್ಟಾರೆಯಾಗಿ ನಷ್ಟವಾಗದಂತೆ ವ್ಯವಹಾರ ಮಾಡ್ತಿದಾನೆ. ಅಥವಾ ಹೂದಾನಿಗೆ ಇನ್ನೂ ಜಾಸ್ತಿ ರೇಟು ಕೊಡೋ ಗಿರಾಕಿ ಯಾರೋ ಇರಬೇಕು. ಹಾಗಾಗಿ ದುಪ್ಪಟ್ಟು ಬೆಲೆ ತರಲು ಸಿದ್ಧನಾಗಿರಲೂಬಹುದು!"

"ನಿನ್ನ ಊಹೆ ಪೂರ್ಣ ತಳ್ಳಿ ಹಾಕುವಂತಿಲ್ಲ. ಆದ್ರೆ ನನಗನ್ನೋದು, ಆತನಿಗೆ ಆಸಕ್ತಿಯಿರೋದು ಆ ಹೂದಾನಿಯಲ್ಲಿ ಮಾತ್ರ. ಕಾವೇರಿ ಎಂಪೋರಿಯಂನಿಂದ ತಂಗರಾಜು ಐದು ವಸ್ತುಗಳನ್ನು ಕೊಂಡ್ಕೊಂಡಿದ್ರೂ, ಸ್ಯಾಮುಯೆಲ್ ಬರೀ ಮೂರು ವಸ್ತು ಮಾತ್ರ ಕೇಳ್ದ. ಯಾಕೆ? ಕಾವೇರಿ ಎಂಪೋರಿಯಂನವರು ಬೇರೆ ಬೇರೆ ವ್ಯಕ್ತಿಗಳಿಂದ ಕಲಾಕೃತಿಗಳನ್ನು ಖರೀದಿ ಮಾಡಿ, ಮಾರುತ್ತಾರೆ. ಪ್ರಾಯಶಃ ಈ ಮೂರು ವಸ್ತುಗಳನ್ನೂ ಅವರು ಒಬ್ಬನಿಂದಲೇ ಪಡೆದುಕೊಂಡಿದ್ದಾಗಿರಬೇಕು! ಅದನ್ನು ಬಲ್ಲ ಸ್ಯಾಮುಯೆಲ್ ಆ ಮೂರನ್ನೂ ಕೇಳಿದ್ದಾನೆ..."

"ಅದನ್ನ ಹೇಗೆ ಹೇಳ್ತಿ?"

"ಕಂಚಿನ ವಿಗ್ರಹಕ್ಕೆ ದರ ಹೇಳಲಿಲ್ಲ. ಯಾಕಂದ್ರೆ ಅವ್ನಿಗೆ ಅದರ ಮಾಹಿತಿಯಿಲ್ಲ! ಉಳಿದ ಮೂರಕ್ಕೂ ದರ ಹೇಳಿದ್ದಾನೆ!! ಖಂಡಿತವಾಗಿ ಅವ್ನು ಕಾವೇರಿ ಎಂಪೋರಿಯಂನಲ್ಲಿ ದರದ ತಿಳಿವಳಿಕೆ ಪಡೆದೇ ಬಂದಿದಾನೆ!! ಹಾಗಾಗಿ, ಎರಡು ವಸ್ತುಗಳಿಗೆ ಕಮ್ಮಿ, ಹೂದಾನಿಗೆ ದುಪ್ಪಟ್ಟು ರೇಟು ಹೇಳಿದ್ದಾನೆ. ಯಾಕೆ? ಪ್ರಾಯಶಃ ಹೀಗೆ ನಡೆದಿದೆ, ಯಾವುದೋ ವ್ಯಕ್ತಿ ಕಾವೇರಿ ಎಂಪೋರಿಯಂಗೆ ತನ್ನ ಹಳೆಯ ಕಲಾಕೃತಿಗಳನ್ನು ವಿಕ್ರಯ ಮಾಡಿದ್ದಾನೆ. ಅದರಲ್ಲಿ ಬಹುತೇಕ ಹೂದಾನಿಯಲ್ಲಿ, ಅಥವಾ ಇನ್ನಾವುದೋ ವಸ್ತುವಿನಲ್ಲಿ ಸ್ಯಾಮುಯೆಲ್‌ನಿಗೆ ಯಾಕೋ ಆಸಕ್ತಿಯಿದೆ. ಅದು ಯಾವುದೆಂದು ಆತನಿಗೆ ನಿಖರವಾಗಿ ಗೊತ್ತಿಲ್ಲದೆಯೂ ಇರಬಹುದು. ಹಾಗಾಗಿ ಆ